ಅ) ಸದರಿ ಪ್ರದೇಶದಲ್ಲಿ ಎಷ್ಟು ಬೀದಿ ದೀಪ ಹಾಕಬೇಕಾಗಿದೆ ಮತ್ತು ಯಾವಾಗ ಹಾಕಲಾಗುವುದು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ತರೀಕೆರೆ ತಾಲ್ಲೂಕಿನಲ್ಲಿ ೨೪ ಹರಿಜನ ಕಾಲೋನಿ-ಲಂಬಾಣಿ ತಾಂಡಗಳು ವಿದ್ಯುದ್ದೀಕರಣವಾಗಬೇಕಾಗಿದೆ.

ಆ) ಈಗಿರುವ ಮಾರ್ಗಸೂಚಿಯಂತೆ ಮೇಲ್ಕಂಡ ಹರಿಜನ ಕಾಲೋನಿ-ಲಂಬಾಣಿ ತಾಂಡಗಳಲ್ಲಿ ಒಟ್ಟು ೨೨೨ ಬೀದಿ ದೀಪಗಳನ್ನು ಹಾಕಬೇಕಾಗುತ್ತದೆ. ಇವುಗಳ ವಿದ್ಯುದ್ದೀಕರಣವನ್ನು ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಆರ್ಥಿಕ ಸಹಾಯದಿಂದ ಪೂರೈಸಲು ಒಂದು ಯೋಜನೆ ತಯಾರಿಸಲು ಮಾಹಿತಿ ಸಂಗ್ರಹಿಸಲಾಗುತ್ತಿದೆ.

## ಮಂಗಳೂರು ತೈಲ ಶುದ್ಧೀಕರಣಾಗಾರದ ಸ್ಥಾಪನೆ

೧೩೧೪. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತೈಲ ಶುದ್ಧೀಕರಣಾಗಾರ ಯಾವಾಗ ಸ್ಥಾಪಿತವಾಗಲಿದೆ?

ಆ) ಇದಕ್ಕೆ ತಗಲುವ ಖರ್ಚಿನ ಅಂದಾಜು ಎಷ್ಟು?

ಇ) ಇದಕ್ಕೆ ಬೇಕಾದ ವಿದ್ಯುತ್, ನೀರು, ಮೊದಲಾದ ಮೂಲಭೂತ ಅವಶ್ಯಕತೆಗಳನ್ನು ರಾಜ್ಯ ಸರ್ಕಾರ ಪೂರೈಸುವುದೇ, ಇದಕ್ಕಾಗಿ ವಶಪಡಿಸಿಕೊಳ್ಳುವ ಭೂಮಿಯ ವಿಸ್ತೀರ್ಣವೆಷ್ಟು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಕಂಪನಿಯ ಪ್ರವರ್ತಕರುಗಳು ಹಾಕಿಕೊಂಡಿರುವ ಯೋಜನೆಯ ಕಾರ್ಯಾಚರಣೆಯನ್ವಯ ೧೯೭೨ರ ಹೊತ್ತಿಗೆ ಸ್ಥಾವರವು ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ.

ಆ) ಸಧ್ಯಕ್ಕೆ ತಿಳಿದುಬಂದಿರುವ ಅಂಕಿ ಅಂಶಗಳ ಪ್ರಕಾರ ೧೨೨೦ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಇ) ಪೂರೈಸುವುದು,

೧೬೬ ಎಕರೆ ೭೫ ಸೆಂಟ್ ಭೂಮಿಯನ್ನು ವಶಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ

ಅಧ್ಯಕ್ಷರು.—ಈಗ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮಂತ್ರಿಗಳು ಸಭೆಯ ಮುಂದೆ ಕಾಗದವನ್ನು ಮಂಡಿಸಬೇಕು.

## ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ) ಕಲಮಿನ ಮೇರೆಗೆ—

ದರ್ನಾಟಕ ಚರ್ಮ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ೧೯೮೦ ಮಾರ್ಚಿನ ಒಂಭತ್ತನೆಯ ವಾರ್ಷಿಕ ವರದಿಯನ್ನು ಸದರಿ ನಿಗಮದ ಕಾರ್ಯಚಟುವಟಿಕೆಗಳ ಬಗ್ಗೆ ಸರ್ಕಾರದ ವಿವರಣಾಪತ್ರ ದೊಂದಿಗೆ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರವನ್ನು ಸಭೆಯ ಮುಂದಿಡಲಾಯಿತು.

ಶ್ರೀ ಎನ್. ಎಂ. ಆಡ್ಯಂತಾಯ.—ನಾನು ಸದನದಲ್ಲಿಯೇ ಇದ್ದೆ. ಪ್ರಶ್ನೆಗೆ ಉತ್ತರ ಬಂದಿಲ್ಲ.